25th July 2008

ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಕಾರ್ಡುಗಳಲ್ಲಿ ತಾರತಮ್ಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 57 : (225)

ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ (ತೇರದಾಳ್)

ಉತ್ತರಿಸುವ ಸಚಿವರು : ಶ್ರೀ ಹೆಚ್. ಹಾಲಪ್ಪ
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಕ್ರ.ಸಂ. ಪ್ರಶ್ನೆ

ಅ) ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗಳ ವಿತರಣೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಉತ್ತರ

ಹೌದು

ಆ) ಹಾಗಿದ್ದಲ್ಲಿ ಯಾವ ರೀತಿ ಹಾಗೂ ಎಂದಿನಿಂದ ಸರಿಪಡಿಸಲಾಗುವುದು.

ಉತ್ತರ

ಅಹವಾಲುಗಳನ್ನು ಪಡೆಯಲಾಗಿದ್ದು ಪರಿಶೀಲಿಸಿ ಅರ್ಹ ಕುಟುಂಬಗಳಿಗೆ ಬಿಪಿಎಲ್ ಪಡಿತರ ಚೀಟಿ ವಿತರಿಸಲಾಗುತ್ತದೆ. ಇತರರಿಗೆ ಎಪಿಎಲ್ ಪಡಿತರ ಚೀಟಿ ನೀಡಲಾಗುವುದು.

ಕ್ರ.ಸಂ. ಪ್ರಶ್ನೆ

ಇ) ತೇರದಾಳ ಮತ ಕ್ಷೇತ್ರದಲ್ಲಿ ಬಿಪಿಎಲ್ ಕಾರ್ಡುಗಳನ್ನು ಬೇಡಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು.

ಉತ್ತರ

1.18.982

ಕ್ರ.ಸಂ. ಪ್ರಶ್ನೆ

ಈ) ಬಂದ ಅರ್ಜಿಗಳನ್ನು ಗುರುತಿಸಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದೇ ಹಾಗಿದ್ದಲ್ಲಿ ಎಂದಿನಿಂದ ವಿತರಿಸಲಾಗುವುದು?

ಉತ್ತರ

ಹೌದು ಈಗಾಗಲೇ ವಿತರಣಾ ಕಾರ್ಯ ಪ್ರಾರಂಭವಾಗಿರುತ್ತದೆ.

ಶ್ರೀ ಸಿದ್ದು ಸವದಿ :– ಮಾನ್ಯ ಅಧ್ಯಕ್ಷರೆ. ನನ್ನ ತೇರದಾಳ ಮತ ಕ್ಷೇತ್ರದಲ್ಲಿ ಬಿ.ಪಿ.ಎಲ್. ಕಾರ್ಡುಗಳು ಬೇಡಿ ಬಂದ ಅರ್ಜಿಗಳ ಸಂಖ್ಯೆ ಎಷ್ಟೆಂದು ಪ್ರಶ್ನೆ ಕೇಳಿದ್ದೆ. 1.18.982 ಗಳಷ್ಟು ಅರ್ಜಿಗಳು ಬಂದಿವೆ ಎಂದು ಉತ್ತರ ಕೊಟ್ಟಿದ್ದಾರೆ. ವಿಶೇಷವಾಗಿ ತೇರದಾಳ ಮತ ಕ್ಷೇತ್ರದಲ್ಲಿ ನೇಕಾರರು ಹೆಚ್ಚಾಗಿದ್ದಾರೆ. ಇಲ್ಲಿ ಕೂಲಿ ಜನ. ಬಡಜನರು ಮತ್ತು ನೇಕಾರರು ಹೆಚ್ಚಾಗಿ ವಾಸವಾಗಿರುವುದರಿಂದ ಇವರೆಲ್ಲರಿಗೂ ಕಾರ್ಡ್ ವಿತರಣೆ ಮಾಡಬೇಕಾಗಿರುವುದರಿಂದ ಬಂದಿರತಕ್ಕಂಥ ಅರ್ಜಿಗಳನ್ನು ಪರಿಶೀಲನೆ ಮಾಡಿ ಯೋಗ್ಯವಿದ್ದರೆ ಎಲ್ಲರಿಗು ಕಾರ್ಡ್ ಕೊಡಿ ಎಂದು ನಾನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ಹಾಲಪ್ಪ :– ಮಾನ್ಯ ಅಧ್ಯಕ್ಷರೆ. ಈಗಾಗಲೇ 5–9 ರಲ್ಲಿ ಅರ್ಜಿಗಳನ್ನು ಕೊಟ್ಟಿದ್ದಾರೆ. ಎಷ್ಟು ಅರ್ಜಿಗಳಿಗೆ ನೀಡಲಾಗುತ್ತದೆಂದು ಈಗಾಗಲೇ ಗುರುತು ಮಾಡಲಾಗಿದೆ. ಈ ಮಾಹಿತಿಯನ್ನೂ ಸಹ ಒದಗಿಸಿಕೊಡುತ್ತೇನೆ.

ಅಧ್ಯಕ್ಷರು :– ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಕರಡಿ ಸಂಗಣ್ಣ ಅಮರಪ್ಪ :– ಮಾನ್ಯ ಅಧ್ಯಕ್ಷರೆ. ನನ್ನದೊಂದು ಪ್ರಶ್ನೆ ಇದೆ.

ಅಧ್ಯಕ್ಷರು :– ಪ್ರಶ್ನೋತ್ತರ ಅವದಿ ಮುಗಿಯಿತು.

ಶ್ರೀ ಕರಡಿ ಸಂಗಣ್ಣ ಅಮರಪ್ಪ :– ಮಾನ್ಯ ಅಧ್ಯಕ್ಷರೆ. ಇದು ಬಹಳ ಮಹತ್ವದ ಪ್ರಶ್ನೆಯಾಗಿದೆ.

ಅಧ್ಯಕ್ಷರು :– ಪ್ರಶ್ನೋತ್ತರ ಅವದಿ ಮುಗಿಯಿತು. ನಾನು ಮತ್ತೆ ಅವಕಾಶ ಕೊಡುವುದಿಲ್ಲ. ನಿಮ್ಮ ಪ್ರಶ್ನೆ ಬಂದಾಗ ನಾನು ನಿಮ್ಮ ಹೆಸರನ್ನು ಕರೆದೆ. ಆದರೆ. ತಾವು ಬಂದಿರಲಿಲ್ಲ. ಈಗ ಪ್ರಶ್ನೋತ್ತರ ಅವದಿ ಮುಗಿಯಿತು. ನಾನು ಮತ್ತೆ ಅವಕಾಶ ಕೊಡುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ. ಇನ್ನೆರೆಡು ಬಹಳ ಮುಖ್ಯವಾದ ಪ್ರಶ್ನೆಗಳಿವೆ. ತಾವು ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು :– ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಏನು ಹೇಳುತ್ತಿದ್ದೇನೆಂದರೆ. ಯಾರು ಪ್ರಶ್ನೆ ಕೇಳಿರುತ್ತಾರೆ. ಅವರು ಮಾತ್ರ ಕೇಳಲಿ ಎಂದರೆ. ಉಪ ಪ್ರಶ್ನೆಗಳನ್ನು ಎಲ್ಲರೂ ಕೇಳಿದರೆ ಇದೇ ಆಗುವುದು. ಇಲ್ಲ. ನಾನು ಅವಕಾಶವನ್ನು

ಕೊಡುವುದಿಲ್ಲ. ಪ್ರಶ್ನೋತ್ತರ ಅವದಿ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು. ಆಗುವುದಿಲ್ಲ. ದಯವಿಟ್ಟು ಸಹಕರಿಸಬೇಕು.

ಆ) ಚುಕ್ಕೆ ಗುರುತಿಲ್ಲದ ಲಿಖಿತ ಮೂಲಕ ಉತ್ತರಿಸಲಾದ

ಪ್ರಶ್ನೆಗಳು ಅನುಬಂಧ –1

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) ;– ಲಿಖಿತ ಮೂಲಕ ಉತ್ತರಿಸಲಾದ 5ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :– ಮಂಡಿಸಲಾಗಿದೆ

ಶ್ರೀ ಸಂಗಣ್ಣ ಕರಡಿ :– ನಮಗೆ ಅವಕಾಶವನ್ನು ಕೊಡದಿದ್ದರೆ ನಾವು ಧರಣಿ ಮಾಡಬೇಕಾಗುತ್ತದೆ.

(ಈ ಹಂತದಲ್ಲಿ ಜೆಡಿ(ಎಸ್)ಮಾನ್ಯ ಸಂಗಣ ಕರಡಿ. ಶ್ರೀ ವೆಂಕಟರಾವ್ ನಾಡಗೌಡ. ಶ್ರೀ ಸಿದ್ದರಾಜುರವರ ಸದನದ ಬಾವಿಗೆ ಬಂದರು)

ಅಧ್ಯಕ್ಷರು ;– ನೀವು ಈ ರೀತಿ ಮಾಡುವುದು ಬೇಕಾಗಿಲ್ಲ. ನಿಮಗೆ ಬೇರೆ ರೂಪದಲ್ಲಿ ಅವಕಾಶ ಕೊಡುತ್ತೇನೆ. ಈಗ ಪ್ರಶ್ನೋತ್ತರ ಅವದಿ ಮುಗಿದಿರುವುದರಿಂದ ನಾನು ಚರ್ಚೆಗೆ ಅವಕಾಶವನ್ನು ಕೊಡುವುದಿಲ್ಲ. ನೀವು ಬೇರೆ ರೂಪದಲ್ಲಿ ಕೇಳಿ ಉತ್ತರವನ್ನು ಪಡೆಯಿರಿ. ಕಾಲಿಂಗ್ ಅಟೆನ್‌ಷನ್‌ನಲ್ಲಿ ಕೇಳಿ ಅವಕಾಶ ಕೊಡುತ್ತೇನೆ.

(ಗೊಂದಲ)

No, No, ನಾನು ಕಟ್ಟುನಿಟ್ಟು ಹಾಕಿದ್ದೇನೆ. ಅದನ್ನು ನಾವು ಪಾಲನೆ ಮಾಡಿಕೊಂಡು ಹೋಗಬೇಕಾಗಿದೆ. ಹಾಗಾದರೆ ದಿನವೂ ಇದೆಏ ಆಗುತ್ತದೆ. ಒಂದೂವರೆ ಎರಡು ಗಂಟೆ ಪ್ರಶ್ನೋತ್ತರವನ್ನು ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ನೀವು ನಿಮ್ಮ ಸ್ಥಳಕ್ಕೆ ಹೋಗಿ. Definitely ನೀವು ಬೇರೆ ರೂಪದಲ್ಲಿ ಕೇಳಿ. ಅವಕಾಶವನ್ನು ಮಾಡಿ ಕೊಡುತ್ತೇನೆ. ಆದರೆ ಪ್ರಶ್ನೋತ್ತರ ಅವದಿಯಲ್ಲಿ ಈ ರೀತಿ ಮಾಡುವುದು ಸರಿಯಾದುದು ಅಲ್ಲ. ಮಾನ್ಯ ವೆಂಕಟರಾವ್ ನಾಡಗೌಡರೇ. ನಿಮಗೆ ಅವಕಾಶ ಸಿಕ್ಕಿದೆ. ವೀವು ಈ ರೀತಿ ಮಾಡುವುದು ಸರಿಯಾದುದು ಅಲ್ಲ.

(ಗೊಂದಲ)

ಪ್ರಶ್ನೋತ್ತರ ಅವದಿಯಲ್ಲಿ ಮಾನ್ಯ ಸಿದ್ದು ಸವದಿಯವರದ್ದು ಪ್ರಶ್ನೆ 57ನೇ ನಂಬರ್ ಇತ್ತು. ಅದಕ್ಕಾಗಿ ಅವರಿಗೆ ಅವಕಾಶವನ್ನು ಕೊಡಲಾಗಿದೆ. ಅದರ ಬಗ್ಗೆ ವಾದವನ್ನು ಮಾಡುವುದು ಬೇಡ. ನೀವು ಬೇರೆ ರೂಪದಲ್ಲಿ ಕೇಳಿ. ಅವಕಾಶವನ್ನು ಕೊಡುತ್ತೇನೆ. ದಯವಿಟ್ಟು ನೀವು ನಿಮ್ಮ ಸ್ಥಾನಕ್ಕೆ ಹೋಗಿ. ಜೀರೋ ಅವರ್‌ನಲ್ಲಿ ಕೇಳಿ ನಾನು ಕೊಡುತ್ತೇನೆ. ಗಂಭೀರವಾದ ವಿಷಯ ಇದ್ದರೆ ಬೇರೆ ರೂಪದಲ್ಲಿ Definitely ಕೊಡುತ್ತೇನೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ. ನಾವು ಶಿಸ್ತಿಗೆ ಒಳಪಡೋಣ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹೋದರು)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ. ನಿಮ್ಮಲ್ಲಿ ಒಂದು ಮನವಿ. ನನ್ನ ಪ್ರಶ್ನೆ ಆಗಿ ಹೋಗಿದೆ. ನಮ್ಮ ಮನವಿ ಏನೆಂದರೆ. ನೀವು ಪ್ರಶ್ನೆ ಕೇಳುವವರಿಗೆ 5 ನಿಮಿಷವನ್ನು ಸೀಮಿತ ಮಾಡಬೇಕು. ಅದರಲ್ಲಿ ಅರ್ಧ ಗಂಟೆ ಚರ್ಚೆ ಮಾಡಿ ಈಗ ಒಂದು ಗಂಟೆಯಾಯಿತು ಎಂದರೆ. ಪ್ರಶ್ನೆ ಇರುವವರಿಗೆ ತೊಂದರೆಯಾಗುತ್ತದೆ.

ಅಧ್ಯಕ್ಷರು ;– ನಾನು ಮಾಡಿಲ್ಲ. ಆದರೆ ಉಪಪ್ರಶ್ನೆಗಳನ್ನು ಕೇಳುವವರು ನೀವು ಅಲ್ಲವೇ?

ಶ್ರೀ ಹೆಚ್.ಸಿ. ಬಾಲಕೃಷ್ಣ : ನಾವು ಕೇಳುತ್ತೇವೆ. ನೀವು ಅದನ್ನು ಕಂಟ್ರೋಲ್ ಮಾಡಿ.ಅದಕ್ಕೆ ನಾವೂ ಒಪ್ಪಿಕೊಳ್ಳುತ್ತೇವೆ. ಎಲ್ಲರೂ ಆ ರೀತಿ ಮಾಡಿದರೆ ಹೇಗೆ?

ಅಧ್ಯಕ್ಷರು ; ಕಂಟ್ರೋಲ್ ಮಾಡಿಯೇ ಇಷ್ಟು ಇದೆ. Definitely ಮಾಡೋಣ.

ಶ್ರೀ ಹೆಚ್. ಸಿ. ಬಾಲಕೃಷ್ಣ ; ಅದನ್ನು ದಯಮಾಡಿ ಮಾಡಿ.

ಅಧ್ಯಕ್ಷರು ;– ಮಾಡೋಣ ಜೀರೋ ಅವರ್‌ನಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ ; ರಾಜ್ಯದಲ್ಲಿ ಉಂಟಾದ ಡೀಸೆಲ್ ಮತ್ತು ರಸಗೊಬ್ಬರ ಅಭಾವದ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ವಿರೋಧ ಪಕ್ಷದ ನಾಯಕರು) ;–